# ದೇವರೊಡನಿದ್ದ ಖಯ್ಯಾಮರು

ಸಂತ ಖಯ್ಯಾಮರು ತಮ್ಮ ಶಿಷ್ಯನೊಡನೆ ದಟ್ಟವಾದ ಅಡವಿಯಲ್ಲಿ ಹೋಗುತ್ತಿದ್ದರು. ಸಂಜೆಯಾಯಿತು. ಖಯ್ಯಾಮರು ಆಸನ ಹಾಸಿ ನಮಾಜಿಗೆ ಕುಳಿತರು. ದೂರದಿಂದ ಸಿಂಹಗರ್ಜನೆ ಕೇಳಿಬಂತು. ಶಿಷ್ಯನು ಹೆದರಿ ಮರವನ್ನು ಏರಿದನು.

ಸಿಂಹ ಗುರುವಿನ ಮುಂದೆಯೇ ಹಾದು ಹೋಯಿತು. ಖಯ್ಯಾಮರು ಸ್ವಲ್ಪವೂ ಕದಲಲಿಲ್ಲ.

ಅವರ ನಮಾಜ್ ಮುಗಿದಮೇಲೆ ಗುರುಶಿಷ್ಯರು ತಮ್ಮ ಪ್ರಯಾಣ ಮುಂದುವರಿಸಿದರು. ಹೀಗೆ ಹೋಗುತ್ತಿರುವಾಗ ಒಂದು ಸೊಳ್ಳೆ ಗುರುವನ್ನು ಕಡಿಯಿತು. ಅವರು ತುಂಬ ಚಡಪಡಿಸುತ್ತ ಸೊಳ್ಳೆಯನ್ನು ಕೊಂದರು.

ಶಿಷ್ಯ ಅಚ್ಚರಿಯಿಂದ ಗುರುಗಳನ್ನು ಕೇಳಿದ "ಭಯಂಕರ ಸಿಂಹ ಬಂದಾಗಲೂ ಕದಲದೆ ಕಲ್ಲಿನಂತೆ ಕುಳಿತಿದ್ದ ನೀವು ಈಗ ಒಂದು ಸೊಳ್ಳೆಗೆ ಇಷ್ಟೊಂದು ತಲ್ಲಣಿಸಿದರಲ್ಲ, ಏಕೆ"

"ಪ್ರಿಯ ಶಿಷ್ಯ, ಸಿಂಹ ಇದಿರಾದಾಗ ನಾನು ದೇವರೊಡನಿದ್ದೆ. ಈಗ ಸೊಳ್ಳೆ ಕಡಿದಾಗ ನಿನ್ನೊಡನಿದ್ದೇನೆ" ಎಂದರು ಖಯ್ಯಾಮರು.



ಕಲೆ : ಪುರುಷೋತ್ತಮ ಕಾರಂತ